# ರಾಯಚೂರು ವಿಶ್ವವಿದ್ಯಾಲಯ

**ಜ್ಞಾನತುಂಗಾ, ಯರಗೇರಾ, ರಾಯಚೂರು-584133, ಕರ್ನಾಟಕ, ಭಾರತ**

E-mail: cdc.rur@gmail.com Web site: https://rucdc.in


ಸಂ: ರಾವಿ/ಕಾಅಮಂ/2021-22/OA/01 ದಿನಾಂಕ: 14-06-2021

**ಪರಿಷ್ಕೃಣೆ ದಿನಾಂಕ:** 18-06-2021

## <u>ಸಂಯೋಜನಾ ಅಧಿಸೂಚನೆ</u>

**ವಿಷಯ:**2021-22ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ತಾತ್ಕಾಲಿಕ/ಶಾಶ್ವತ ಸಂಯೋಜನೆಗಳ ಮುಂದುವರಿಕೆ/ವಿಸ್ತರ ಮತ್ತು ಹೊಸ ಕಾಲೇಜು, ಹೊಸ ಕೋರ್ಸು, ಹೊಸ ವಿಷಯ, ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ **ಆನ್‌ಲೈನ್ ಮುಖಾಂತರ ಅರ್ಜಿ** ಸಲ್ಲಿಸುವ ಕುರಿತು.

**ಉಲ್ಲೇಖ:**1.ಕರ್ನಾಟಕ ರಾಜ್ಯಪತ್ರ, ಭಾಗ-3, ನಂ.310 ದಿ.: 27 ಜುಲೈ 2020

2.ಕುಲಸಚಿವರು, ಗುಲಬರ್ಗಾ ವಿಶ್ವವಿದ್ಯಾಲಯ ಇವರ ಪತ್ರ ಸಂಖ್ಯೆ: 834 ದಿನಾಂಕ: 20-03-2021

3. ಸರ್ಕಾರಿ ಆದೇಶ ಸಂಖ್ಯೆ: ಇಡಿ 34 ಇಜಿಒವಿ 2020 (ಭಾಗ-2), ಬೆಂಗಳೂರು, ದಿನಾಂಕ: 10-06-2021

4.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 11-06-202

*****

ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ರಾಯಚೂರು ವಿಶ್ವವಿದ್ಯಾಲಯವು ಬರುವ 2021-22ನೇ ಶೈಕ್ಷಣಿಕ ಸಾಲಿಗೆ ಈ ಮೊದಲು ಗುಲಬರ್ಗಾ ವಿಶ್ವವಿದ್ಯಾಲಯದ ಅಡಿಯಲ್ಲಿದ್ದ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಪ್ರಕ್ರಿಯೆ ಪ್ರಾರಂಭಿಸಿದೆ. ಮೇಲ್ಕಾಣಿಸಿದ ಎರಡು ಜಿಲ್ಲೆಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಸಂಯೋಜನೆ ಮುಂದುವರಿಕೆ/ವಿಸ್ತರಣೆ/ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ; ಹೊಸ ಕೋರ್ಸು/ಹೊಸ ವಿಷಯ/ ಹೊಸ ಭಾಷಾ ವಿಷಯ ಅಳವಡಿಕೆ/ ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ಹಾಗೂ ನೋಂದಾಯಿತ ಶಿಕ್ಷಣ ಸಂಸ್ಥೆ/ಟ್ರಸ್ಟಗಳಿಂದ ಹೊಸ ಸ್ನಾತಕ/ಸ್ನಾತಕೋತ್ತರ ಕಾಲೇಜು ಪ್ರಾರಂಭಿಸಲು ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಸ್ನಾತಕ ಕೋರ್ಸುಗಳು**
   1. ಕಲಾ, ವಿಜ್ಞಾನ, ವಾಣಿಜ್ಯ, ಚಿತ್ರಕಲೆ
   2. ಬಿಸಿಎ, ಬಿಬಿಎಮ್, ಬಿಎಸ್‌ಡಬ್ಲೂ
   3. ಬಿಎಡ್, ಬಿಪಿಎಡ್
2. **ಸ್ನಾತಕೋತ್ತರ ಕೋರ್ಸುಗಳು**
   1. ಎಂ.ಎ. : ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಸಂಸ್ಕೃತ, ಮರಾಠಿ, ಫೈನ್ ಆರ್ಟ, ದೃಶ್ಯಕಲೆ, ಸಂಗೀತ
   2. ಎಂ.ಎ. : ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಮಹಿಳಾ ಅಧ್ಯಯನ, ಮನೋವಿಜ್ಞಾನ, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ
   3. ಎಮ್‌ಜೆಎಮ್‌ಸಿ (ಜರ್ನಲಿಜ್‌ಂ ಆ್ಯಂಡ್ ಮಾಸ್ ಕಮ್ಯುನಿಕೇಶನ್), ಎಂಎಸ್‌ಡಬ್ಲೂ

4. ಎಂ.ಎಸ್ಸಿ., : ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್, ಸೂಕ್ಷ್ಮಜೀವಶಾಸ್ತ್ರ, ಬಯೋಕೆಮಿಸ್ಟ್ರಿ, ಬಯೋಟೆಕ್ನಾಲಜಿ, ಸಸ್ಯಶಾಸ್ತ್ರ, ಜೀವಶಾಸ್ತ್ರ, ಪರಿಸರ ವಿಜ್ಞಾನ,
5. ಎಂ.ಕಾಮ್, ಎಂಬಿಎ, ಎಂಸಿಎ, ಎಂಟಿಎ

3. **ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳು :**

1. ಟ್ಯಾಕ್ಸ್ ಮ್ಯಾನೇಜಮೆಂಟ್, ಟೂರಿಸಂ ಆ್ಯಂಡ್ ಟ್ರಾವೆಲ್ಸ್ ಮ್ಯಾನೇಜಮೆಂಟ್, ಎಕ್ಸಪೋರ್ಟ್ ಮ್ಯಾನೇಜಮೆಂಟ್, ಕಂಪ್ಯೂಟರ ಪ್ರೋಗ್ರಾಮಿಂಗ್ ಆ್ಯಂಡ್ ಸಿಸ್ಟಮ್ ಅನಾಲೈಸೆಸ್, ಹ್ಯೂಮನ ರಿಸೌರ್ಸ ಮ್ಯಾನೇಜಮೆಂಟ್, ಹಾಸ್ಪಿಟಲ್ ಮ್ಯಾನೇಜಮೆಂಟ್, ಕಂಪ್ಯೂಟರ ಅಪ್ಲಿಕೇಷನ್, ಟೆಲಿವಿಜನ್ ಸ್ಟಡೀಸ್, ಎನಿಮೇಶನ್
2. ಪಂಚಾಯತ್ ರಾಜ್ ಆ್ಯಂಡ್ ರೂರಲ್ ಡೆವಲಪಮೆಂಟ್, ಜರ್ನಲಿಜ್ಂ ಆ್ಯಂಡ್ ಮಾಸ್ ಕಮ್ಯುನಿಕೇಶನ್, ಫ್ಯಾಶನ ಡಿಜೈನ ಟೆಕ್ನಾಲಜಿ, ಟ್ರಾನ್ಸಲೇಶನ ಸ್ಕಿಲ್
3. ವಚನ ಸಾಹಿತ್ಯ, ನಾಟಕ ಸಾಹಿತ್ಯ ಮತ್ತು ರಂಗಭೂಮಿ, ಅಂಬೇಡ್ಕರ್ ಸ್ಟಡೀಜ್, ಯೋಗ.

ಸಂಯೋಜನೆಯ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಈ ಕೆಳಗೆ ನೀಡಿದ ಅಂತರ್ಜಾಲ ವಿಳಾಸವನ್ನು ಉಪಯೋಗಿಸಬೇಕು

http:/www.onlineaffiliation.karnataka.gov.in/Affiliation2122/login.aspg

ಅಥವಾ ವಿಶ್ವವಿದ್ಯಾಲಯದ ಸಿಡಿಸಿ ವೆಬ್‌ಸೈಟ್ https://rucdc.in ನಲ್ಲಿರುವ ಸಿಡಿಸಿ ಪುಟಗಳಲ್ಲಿರುವ ಲಿಂಕನ್ನು ಒತ್ತಿ ತಮ್ಮ ಕಾಲೇಜಿಗೆ ನೀಡಿದ ಯುಸರ್ ಐಡಿ ಮತ್ತು ಪಾಸ್‌ವರ್ಡಗಳನ್ನು ಉಪಯೋಗಿಸಿ ಸಂಯೋಜನಾ ಅರ್ಜಿಯಲ್ಲಿ ಕೇಳಿರುವ ಮಾಹಿತಿಯನ್ನು ಭರ್ತಿಮಾಡಿ ಅವಶ್ಯಕ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕಾದ ಸಂಯೋಜನಾ ಶುಲ್ಕವನ್ನು ಪಾವತಿಸಿ ಅಪ್‌ಲೋಡ್ ಮಾಡಬೇಕು. ಹಾಗೂ ಸಂಯೋಜನಾ ಅರ್ಜಿಯ ಒಂದು ಪ್ರಿಂಟ್ ಮಾಡಿದ ಪ್ರತಿಯನ್ನು ದಾಖಲೆಗಳ ಛಾಯಾಪ್ರತಿಗಳೊಂದಿಗೆ ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ಜ್ಞಾನತುಂಗಾ, ಯರಗೇರಾ, ರಾಯಚೂರು-584133 ವಿಳಾಸಕ್ಕೆ ಕಳುಹಿಸಬೇಕು. ಲಗತ್ತಿಸಿದ ದಾಖಲೆಗಳ ಛಾಯಾಪ್ರತಿಗಳ ಪ್ರತಿ ಪುಟವನ್ನು ಪ್ರಾಚಾರ್ಯರು ಸಹಿ ಹಾಗೂ ಮುದ್ರೆಯೊಂದಿಗೆ ಧೃಡೀಕರಿಸಬೇಕು. ಅರ್ಜಿ ಸಲ್ಲಿಸುವ ದಿನಾಂಕದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| **ಸಂಯೋಜನಾ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಗಳು** | | |
|---|---|---|
| ವಿವರ | ದಂಡ ಶುಲ್ಕ ರಹಿತ ಕೊನೆಯ ದಿನಾಂಕ | ದಂಡ ಶುಲ್ಕ ರೂ.10,000 ದೊಂದಿಗೆ ಕೊನೆಯ ದಿನಾಂಕ |
| 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಮಹಾವಿದ್ಯಾಲಯಗಳಿಗೆ | 05-07-2021 | 06-07-2021 **ರಿಂದ** 10-07-2021 **ರವರೆಗೆ** |
| ಹೊಸ ಸ್ನಾತಕ / ಸ್ನಾತಕೋತ್ತರ ಕಾಲೇಜು ಪ್ರಾರಂಭಿಸಲು | 09-07-2021 | 10-07-2021 **ರಿಂದ** 14-07-2021 **ರವರೆಗೆ** |

**ಅವಧಿ ಮೀರಿದ ನಂತರ ಯಾವುದೇ ಅರ್ಜಿಗಳನ್ನು ಶುಲ್ಕ ಪಾವತಿಸಿದರೂ ಕೂಡಾ ಸ್ವೀಕರಿಸಲಾಗುವುದಿಲ್ಲ, ಮುಂದುವರೆದು ಅಂತಹ ಮಹಾವಿದ್ಯಾಲಯಗಳು ಪಾವತಿಸಿದ ಹಣವನ್ನು ಕಾಲಾಂತರದಲ್ಲಿ ಹಿಂದುರಗಿಸಲಾಗುವುದು.**

ಸಂಯೋಜನಾ ಶುಲ್ಕದ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನ ಸಿಡಿಸಿ (CDC) ಪುಟಗಳಲ್ಲಿ ಕೊಡಲಾಗಿದೆ. ವಿಶ್ವವಿದ್ಯಾಲಯಕ್ಕೆ ಸಂದಾಯವಾಗಬೇಕಾದ ಶುಲ್ಕವನ್ನು NEFT/RTGS ಮುಖಾಂತರ ಈ ಕೆಳಗಿನ ಬ್ಯಾಂಕ್ ಖಾತೆಗೆ ಜಮಾ ಮಾಡುವುದು ಮತ್ತು ಬ್ಯಾಂಕ್‌ನಲ್ಲಿ ಶುಲ್ಕ ಪಾವತಿಸಿದ ರಸೀದಿಯ ನಕಲು ಪ್ರತಿಯ ಹಿಂಭಾಗದಲ್ಲಿ ಮಹಾವಿದ್ಯಾಲಯದ ಹೆಸರನ್ನು ನಮೂದಿಸಿ ಸಂಕ್ಷಿಪ್ತವಾಗಿ ಯಾವ ಉದ್ದೇಶಕ್ಕಾಗಿ ಹಣ ಪಾವತಿ ಮಾಡಲಾಗಿದೆ ಎನ್ನುವದನ್ನು ಬರೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

ಬ್ಯಾಂಕ್ ಖಾತೆ : FINANCE OFFICER CDC AFFILIATION RAICHUR UNIVERSITY
ಬ್ಯಾಂಕ್ ಹೆಸರು : UNION BANK OF INDIA, RAICHUR
ಖಾತೆ ಸಂಖ್ಯೆ : 049112010000051
ಐಎಫ್‌ಎಸ್‌ಸಿ ಕೋಡ್ : UBIN0804916

**ವಿಶೇಷ ಸೂಚನೆ :**

1. ಸರಿಯಾದ ಮಾಹಿತಿ ಒದಗಿಸದ, ಸೂಕ್ತ ದಾಖಲೆಗಳನ್ನು ನೀಡದೇ ಇರುವ ಹಾಗೂ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕಾದ ಸಂಯೋಜನಾ ಶುಲ್ಕವನ್ನು ಪೂರ್ತಿಯಾಗಿ ಭರಿಸದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
2. ಸಂಯೋಜನಾ ಶುಲ್ಕ ಭರಿಸಿದ ರಸೀದಿಯ ಹಿಂಬಾಗದಲ್ಲಿ ಮಹಾವಿದ್ಯಾಲಯದ ಮೊಹರು ಹಾಕಿ ಸಂಕ್ಷಿಪ್ತವಾಗಿ ಯಾವ ಕಾರಣಕ್ಕೆ ಹಣ ಸಂದಾಯ ಮಾಡಲಾಗಿದೆ. ಎನ್ನುವುದನ್ನು ಬರೆಯಬೇಕು.
3. ಮಹಾವಿದ್ಯಾಲಯದ ಜೊತೆಗೆ ಸಂಪರ್ಕಕ್ಕೆ ಖಾಯಂ ವಿಳಾಸ, ಚಾಲ್ತಿಯಲ್ಲಿರುವ, ಸ್ಥಿರ ದೂರವಾಣಿ(Lad line) /ಮೊಬೈಲ್ ದೂರವಾಣಿ ಸಂಖ್ಯೆ, Email ವಿಳಾಸವನ್ನು ದೋಷರಹಿತವಾಗಿ ನಮೂದಿಸಬೇಕು. ಸಂಪರ್ಕ ಮಾಹಿತಿ ಸರಿಯಾಗಿ ನೀಡದಿದ್ದಲ್ಲಿ ಅದಕ್ಕೆ ಕಾಲೇಜಿನ ಪ್ರಾಚಾರ್ಯರೇ ಹೊಣೆಗಾರರಾಗುತ್ತಾರೆ.
4. ಗುಲಬರ್ಗಾ ವಿಶ್ವವಿದ್ಯಾಲಯದಿಂದ 2020–21ರ ಸಾಲಿಗೆ ಶೈಕ್ಷಣಿಕ ಮಾನ್ಯತೆಯನ್ನು ಪಡೆದ ಮಹಾವಿದ್ಯಾಲಯಗಳು ಗುಲಬರ್ಗಾ ವಿಶ್ವವಿದ್ಯಾಲಯ ನೀಡಿದ ಅಧಿಸೂಚನೆ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಲೇಬೇಕು.
5. ವೃತ್ತಿಪರ ಕೋರ್ಸಗಳಾದ ಎಂಬಿಎ ಮತ್ತು ಎಂಸಿಎ ಕೋರ್ಸಗಳನ್ನು ಪ್ರಾರಂಭಿಸಲು ಎಆಯ್‌ಸಿಟಿ (AICT) ಯಿಂದ ಹಾಗೂ ಬಿಎಡ್ ಮತ್ತು ಬಿಪಿಎಡ್ ಕೋರ್ಸಗಳನ್ನು ಪ್ರಾರಂಭಿಸಲು ಎನ್‌ಸಿಟಿಇ (NCTE) ಯಿಂದ ಕಡ್ಡಾಯವಾಗಿ ಮಾನ್ಯತೆಯನ್ನು ಪಡೆದಿರಬೇಕು ಮತ್ತು ಅದರ ದಾಖಲೆಯನ್ನು ಲಗತ್ತಿಸಬೇಕು.
6. 2020–21ನೇ ಸಾಲಿನಲ್ಲಿ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳು AISHE DCF-II ದಲ್ಲಿ ಮಾಹಿತಿ ಒದಗಿಸಿರುವ ಬಗ್ಗೆ ಮಾಹಿತಿ ನೀಡಬೇಕು ಇಲ್ಲದಿದ್ದಲ್ಲಿ ಅಂತಹ

ಮಹಾವಿದ್ಯಾಲಯಗಳಿಗೆ 2021–22ರ ಶೈಕ್ಷಣಿಕ ವರ್ಷದ ಸಂಯೋಜನೆ ಅಧಿಸೂಚನೆಯನ್ನು ನೀಡಲಾಗುವುದಿಲ್ಲ.

7. ಈ ಅಧಿಸೂಚನೆ ಕರ್ನಾಟಕ ಸರ್ಕಾರದಿಂದ ಕಾಲಕಾಲಕ್ಕೆ ಬರುವ ಸೂಚನೆಗಳು/ ಆಜ್ಞೆಗಳು / ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.

8. ಹೊಸ ಕಾಲೇಜು ಪ್ರಾರಂಭ, ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಕೋರ್ಸ/ಹೊಸ ವಿಷಯ / ಹೊಸ ಭಾಷಾ ವಿಷಯಗಳ ಅಳವಡಿಕೆ ಹಾಗೂ ಪ್ರವೇಶ ಮಿತಿ ಹೆಚ್ಚಳದಂತಹ ಕೆಲವು ಪ್ರಕರಣಗಳಿಗೆ ಕರ್ನಾಟಕ ಸರ್ಕಾರದ ಅನುಮೋದನೆ ಕಡ್ಡಾಯವಾಗಿದ್ದು ಸರ್ಕಾರ ಅನುಮೋದನೆ ನೀಡಿದ ನಂತರವೇ ವಿಶ್ವವಿದ್ಯಾಲಯವು ಸಂಯೋಜನಾ ಅಧಿಸೂಚನೆಯನ್ನು ಕಾಲೇಜುಗಳಿಗೆ ನೀಡುತ್ತದೆ.

9. ಕಾಲಕಾಲಕ್ಕೆ ಕರ್ನಾಟಕ ಸರ್ಕಾರ ಮತ್ತು ವಿಶ್ವವಿದ್ಯಾಲಯ ಕೊಡುವ ಸಲಹೆ–ಸೂಚನೆಗಳನ್ನು ಪಾಲನೆ ಮಾಡುವುದು

**ಪರಿಷ್ಕೃತ ಭಾಗ (ದಿನಾಂಕ ೧೮–೦೬–೨೦೨೧)**

10. **ಸರ್ಕಾರಿ ಆದೇಶ ಸಂಖ್ಯೆ : ಇಡಿ21 ಯುಬಿವಿ 2004, ಬೆಂಗಳೂರು ದಿನಾಂಕ 15–05–2004** ರ ಪ್ರಕಾರ ಪರಿಶಿಷ್ಟ ಜಾತಿ; ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ಕಾಲೇಜುಗಳು ಪಾವತಿಸಬೇಕಾದ ಸಂಯೋಜನಾ ಶುಲ್ಕದಲ್ಲಿ ಮಾತ್ರ ಶೇ. 50 ರಷ್ಟು ರಿಯಾಯತಿ ನೀಡಲಾಗಿದೆ. ಸದರಿ ಕಾಲೇಜುಗಳು ತಮ್ಮ ಸಂಸ್ಥೆಯು ಪರಿಶಿಷ್ಟ ಜಾತಿ; ಪರಿಶಿಷ್ಟ ಪಂಗಡಕ್ಕೆ ಸೇರಿರುವದರ ಅಧಿಕೃತ ಮಾನ್ಯತಾ ಸರ್ಕಾರಿ ದಾಖಲೆಯನ್ನು ಕಡ್ಡಾಯವಾಗಿ ಸಲ್ಲಿಸಬೇಕು

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು